## ಪುರುಷ ಪಾತ್ರಗಳಿಗೇಕೆ ಗಡ್ಡ?

ಇತ್ತೀಚೆಗೆ ಯಾವುದೇ ಧಾರಾವಾಹಿಯಾದರೂ ಸರಿ ಅಲ್ಲಿನ ಪುರುಷ ಪಾತ್ರಧಾರಿಗಳು ಗಡ್ಡ ಬೆಳೆಸಿಕೊಂಡಿರುತ್ತಾರೆ. ಇದು ಬರಿ ಕನ್ನಡ ಧಾರಾವಾಹಿಗಷ್ಟೇ ಸೀಮಿತವಲ್ಲ. ಇದಕ್ಕೆ ಕಾರಣವೇನು ಎಂಬ ಪ್ರಶ್ನೆ ನೋಡುಗರಲ್ಲಿ ಮೂಡುತ್ತದೆ. ಅವರಿಗೆ ತಾವು ಗಂಡಸರು ಎಂಬುದನ್ನು ತೋರ್ಪಡಿಸಿಕೊಳ್ಳಲು ಇದೊಂದು ಸಾಧನವಾಗಿದೆ ಎನಿಸುತ್ತದೆ. ಏಕೆಂದರೆ, ಯಾವುದೇ ಧಾರಾವಾಹಿಯಾಗಿರಲಿ ಅಲ್ಲಿ ಬರುವ ಹೆಣ್ಣು ಪಾತ್ರಧಾರಿಗಳು ಶಾಕಿನಿ ಢಾಕಿನಿಯರಿಂದ ಮೊದಲಾಗಿ ಕೈಕೇಯಿ, ಮಂಥರೆಯರೂ ನಾಚುವಂತಿರುತ್ತದೆ. ಇವರ ಆಟಗಳ ಮುಂದೆ ಯಾವ ಗಂಡೂ ಸರಿಸಾಟಿಯಲ್ಲ. ಈಗಂತೂ ಭೂತ ಪ್ರೇತಗಳು ಸಾಲದೆಂಬಂತೆ ನಾಗಿಣಿಯರೂ ಸವಾಲಾಗುತ್ತಿದ್ದಾರೆ. ನಮ್ಮ ಮಹಿಳೆಯರನ್ನು ಈ ರೀತಿ ಪೋಷಿಸುತ್ತಿರುವ ಧಾರಾವಾಹಿಗಳ ಕಥೆ ರಚನಕಾರರು ಮತ್ತು ನಿರ್ದೇಶಕರಿಗೆ ದೇಶದ ಯಾವ ಅತ್ಯುನ್ನತ ಪ್ರಶಸ್ತಿಯೂ ಕಡಿಮೆ. ಹೀಗಾಗಿ ಗಂಡು ಪಾತ್ರಧಾರಿಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಗಡ್ಡಕ್ಕೆ ಕೈ ಹಾಕಿದ್ದಾರೆನಿಸುತ್ತದೆ.

—ಕೆ.ಎಸ್.ಸೋಮೇಶ್ವರ, ಬೆಂಗಳೂರು

## ಮುಗಿಯದ ಧಾರಾವಾಹಿಗಳು

ಅಮ್ಮಾ.. ಇಷ್ಟು ವರ್ಷವಾದರೂ ಪುಟ್ಟ ಗೌರಿ ಮದುವೆ ಇನ್ನೂ ಬರ್ತಾ ಇದೆಯಲ್ಲಾ? ಮಗಳು ಕೇಳಿದಳು ಅಮ್ಮನ್ನ. ಹೌದು ಮಗಳೇ, ಅದನ್ನು ಕನ್ನಡದಲ್ಲಿ ಮೆಗಾ ಧಾರಾವಾಹಿ ಎಂದು ಕರೆಯುತ್ತಾರೆ. ಅದು ಸದ್ಯದಲ್ಲಿ ಮುಗಿಯುವ ಹಾಗೆ ಕಾಣುತ್ತಿಲ್ಲ. ಬಹುಶಃ ನಿನ್ನ ಮೊಮ್ಮಗಳೂ ನಿನ್ನನ್ನು ಇದೇ ಪ್ರಶ್ನೆ ಕೇಳಬಹುದು. ಆಗ ನೀನು ಇದೊಂದು ರಾಮಾಯಣ ಮಹಾಭಾರತಗಳಿಗಿಂತ ಪುರಾತನ ಪುರಾಣ ಎಂದು ಹೇಳಬಹುದು ಎನ್ನುತ್ತಾಳೆ ತಾಯಿ. ತಲೆ ಬುಡವಿಲ್ಲದ ಕಥೆಗಳಿರುವ ಧಾರಾವಾಹಿಗಳು ಕನ್ನಡದಲ್ಲಷ್ಟೇ ಅಲ್ಲ ಬೇರೆ ಭಾಷೆಯಲ್ಲೂ ಪ್ರಸಾರವಾಗುತ್ತವೆ.

ದಿನಕ್ಕೊಂದು ತಿರವುಗಳನ್ನು ಪಡೆದು ಓದುಗರನ್ನು ಕುತೂಹಲದ ತುದಿಗಾಲ ಮೇಲೆ ನಿಲ್ಲಿಸಿದ್ದೇವೆಂದು ನಿರ್ಮಾಪಕರೂ, ನಿರ್ದೇಶಕರೂ ಭಾವಿಸಿರುತ್ತಾರೆ. ಅತಿ ಜನಪ್ರಿಯ ಧಾರಾವಾಹಿಯೆಂದು ಜಾಹೀರಾತುದಾರರನ್ನೂ ಸೆಳೆಯುವ ಪ್ರಯತ್ನವೂ ಆಗುತ್ತದೆ. ಇಂತಹ ಧಾರಾವಾಹಿಗಳಿಂದ ಆಗುವ ಪ್ರಯೋಜನವಾದರೂ ಏನು?

—ಕೊ.ಸು. ನರಸಿಂಹ ಮೂರ್ತಿ, ಮೈಸೂರು

ವಾರದ ಪತ್ರ

## ಮಂತ್ರಕ್ಕಿಂತ ಉಗುಳೇ ಜಾಸ್ತಿ!

'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' ಎಂಬ ಗಾದೆ ಇದೆ. ಆದರೆ, ವೀಕ್ಷಕರಿಗೂ ಮೊಸರಲ್ಲಿ ಕಲ್ಲು ಬೆರೆಸಿ, ಬಡಿಸುತ್ತಿದ್ದಾರೆ ನಮ್ಮ ಟಿವಿಯವರು. ವಾಹಿನಿಗಳು ನಡೆಯುವುದೇ ಜಾಹೀರಾತುಗಳ ಆದಾಯದ ಮೇಲೆ ಎಂಬ ಮಾತು ನಿಜ. ಆದರೆ, 'ಅತಿಯಾದರೆ, ಅಮೃತವೂ ವಿಷವಾಗುತ್ತದೆ' ಎಂಬ ಮಾತೂ ಸಹ ಅಷ್ಟೇ ಸತ್ಯ.

'ಪ್ರತಿ ಅರ್ಧ ಗಂಟೆಯ ಅವಧಿಯ ಕಾರ್ಯಕ್ರಮದಲ್ಲಿ ಜಾಹೀರಾತುಗಳ ಅವಧಿ ಆರು ನಿಮಿಷಗಳನ್ನು ಮೀರಬಾರದು' ಎಂಬ ಸರ್ಕಾರದ ನಿಯಮವನ್ನು ಗಾಳಿಗೆ ತೂರಿ, ಜಾಹೀರಾತುಗಳನ್ನು ಮನಬಂದಂತೆ ತೂರಿಸಲಾಗುತ್ತಿದೆ. ಈ ಜಾಹೀರಾತುಗಳಲ್ಲಿ ಎರಡು ವಿಧ. ಒಂದು– ವಾಹಿನಿಯಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳ ಜಾಹೀರಾತುಗಳು; ಇನ್ನೊಂದು – ವಾಣಿಜ್ಯ ಜಾಹೀರಾತುಗಳು. ಈ ಎರಡು ವಿಧದ ಜಾಹೀರಾತುಗಳೂ ಒಂದರ ಹಿಂದೆ ಒಂದರಂತೆ ಅರ್ಧ ಗಂಟೆಯ ಕಾರ್ಯಕ್ರಮದಲ್ಲಿ ಐದು ಬಾರಿ ಬಿತ್ತರಗೊಳ್ಳುತ್ತವೆ. ಪ್ರತಿ ಬಾರಿಯೂ ಧಾರಾವಾಹಿಯ ಕಥೆ (ಇದ್ದರೆ?) ಎರಡು ನಿಮಿಷಗಳಾದರೆ, ಜಾಹೀರಾತುಗಳ ಕಾಲಾವಧಿ ನಾಲ್ಕು ನಿಮಿಷಗಳಾಗಿರುತ್ತದೆ. ಆದರೆ, ಹೀಗೆ ಪ್ರತಿ ಬಾರಿಯೂ ಜಾಹೀರಾತುಗಳು ಮೂಡಲಾರಂಭವಾದಾಕ್ಷಣ ಅಂತಹ ವಿರಾಮ ಕಾಲದ (Break) ಅವಧಿ ಎಷ್ಟೆಂಬುದನ್ನು ಸೂಚಿಸುವ ಚಿಹ್ನೆ (icon) ಅಥವಾ, ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, 'Back in...' ಎಂಬ ಚಿಹ್ನೆ ಟಿವಿ ಪರದೆಯ ಒಂದು ಮೂಲೆಯಲ್ಲಿ ಮೂಡಬೇಕಾದುದು ನ್ಯಾಯ ಸಮ್ಮತ. ಆದರೆ, ಹೀಗಾಗುವುದೇ ಇಲ್ಲ. ಜಾಹೀರಾತುಗಳು ಬಿತ್ತರವಾಗುವ ಪ್ರತಿ ಬಾರಿಯೂ ವಾಹಿನಿಯ ಕಾರ್ಯಕ್ರಮಗಳ ಜಾಹೀರಾತುಗಳ ನಂತರವಷ್ಟೇ 'Back in 02:00' ಎಂಬ ಚಿಹ್ನೆ ಟಿವಿ ಪರದೆಯ ಒಂದು ಮೂಲೆಯಲ್ಲಿ ಕಾಣ ಸಿಗುತ್ತದೆ. ಇನ್ನು ಚಲನಚಿತ್ರ ವಾಹಿನಿಗಳಂತೂ ಎರಡೂವರೆ ಗಂಟೆಗಳ ಕಾಲಾವಧಿಯ ಚಲನಚಿತ್ರವನ್ನು ಜಾಹೀರಾತುಗಳ ಸಮ್ಮಿಳನದೊಂದಿಗೆ ನಾಲ್ಕು ಗಂಟೆಗಳವರೆಗೂ ಹಿಗ್ಗಿಸುತ್ತವೆ. ಹೀಗೆ, 'ಮಂತ್ರಕ್ಕಿಂತ ಉಗುಳೇ ಜಾಸ್ತಿ' ಎಂಬಂತೆ, ಕಾರ್ಯಕ್ರಮದ ಸಿಂಹಪಾಲನ್ನು ಜಾಹೀರಾತುಗಳೇ ಕಬಳಿಸುತ್ತವೆ.

'ಜನರಿಗಾಗಿ ವಾಹಿನಿಗಳಿಲ್ಲ; ವಾಹಿನಿಗಳಿಗಾಗಿ ಜನರು' ಎಂಬ ಧಾರ್ಷ್ಟ್ಯ ಮನೋಭಾವ ನಮ್ಮ ಟಿವಿ ವಾಹಿನಿಗಳದ್ದಾಗಿದೆ ಎನ್ನದೆ ವಿಧಿಯಿಲ್ಲ. ವಾಹಿನಿಗಳ ಈ ಬಗೆಯ ನಿಲುವಿಗೆ ಶಾಶ್ವತವಾಗಿ ಕಡಿವಾಣ ಹಾಕುವ ಪ್ರಕ್ರಿಯೆ ನಮ್ಮ ಸರ್ಕಾರದಿಂದ ಆಗಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ರಾತ್ರಿ ಒಂಬತ್ತು ಗಂಟೆಯ ನಂತರದ ಕಾರ್ಯಕ್ರಮಗಳನ್ನು ಜಾಹೀರಾತು ಮುಕ್ತಗೊಳಿಸಲು ಬೇಕಾದ ಅಗತ್ಯ ಕಾನೂನನ್ನು ನಮ್ಮ ಸರ್ಕಾರ ಜಾರಿಗೆ ತರಬೇಕಾದುದು ಅಗತ್ಯ.

-ಉಡುಪಿ ಅನಂತೇಶ ರಾವ್, ಬೆಂಗಳೂರು.

## ಲೆಕ್ಕದಲ್ಲಿ ಸೊನ್ನೆ!

ಚಂದನ ವಾಹಿನಿಯ ಥಟ್ ಅಂತ ಹೇಳಿ ಕಾರ್ಯಕ್ರಮದಲ್ಲಿ ಭಾಗವಹಿಸುವವರಲ್ಲಿ ಶೇ. 70 ರಷ್ಟು ಸ್ಪರ್ಧಿಗಳಿಗೆ ಕಾಡುವ ಸಮಸ್ಯೆ 'ಈ ಕೆಳಗಿನ ಲೆಕ್ಕವನ್ನು ಪೂರ್ತಿ ಮಾಡಿ ಅಂತಿಮ ಮೊತ್ತ ಹೇಳಿ' ಎಂಬುದು. ನಮ್ಮ ಸ್ಪರ್ಧಿಗಳಲ್ಲಿ ಬಹಳಷ್ಟು ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಆದರೆ ಲೆಕ್ಕದಲ್ಲಿ ಮಾತ್ರ ಸರಿ ಉತ್ತರ ಹೇಳುವವರು ಅಪರೂಪ. ಕೂಡಿ+, ಕಳೆ–, ಗುಣಿಸು X, ಭಾಗಿಸು.. ಇಂತಹ ಸರಳ ಲೆಕ್ಕವನ್ನು ಮಾಡಲು ಸಾಧ್ಯವಿಲ್ಲ ಅಂದರೆ ಆಶ್ಚರ್ಯವಾಗುತ್ತದೆ.

—ಬೆಳ್ಳಾವೆ ರಮೇಶ್, ಬೆಂಗಳೂರು

## ಸ್ಪರ್ಧಿಗಳ ಆರೋಗ್ಯಕ್ಕೆ ಆದ್ಯತೆ

ದಿನಾಂಕ 26ರ (ಭಾನುವಾರ) ರಾತ್ರಿ 9 ಗಂಟೆಗೆ ಪ್ರಸಾರವಾದ 'ಸೂಪರ್ ಮಿನಿಟ್' ಕಾರ್ಯಕ್ರಮ (ಕಲರ್ಸ್ ಕನ್ನಡ ವಾಹಿನಿ)ದಲ್ಲಿ, ಆಟದ 9ನೇ ಸುತ್ತಿನ ನಂತರ, 'ಗಾಂಧಾರಿ ತಂಡ'ದ ಕಲಾವಿದೆ ಕಾವ್ಯ ಅವರು ಉಸಿರಾಟದ ತೊಂದರೆಯಿಂದ ನಿರ್ಗಮಿಸಿದ್ದು ತಂಡದ ಇತರ ಸ್ಪರ್ಧಿಗಳಿಗೆ ಹಾಗೂ ಅಲ್ಲಿದ್ದ ಎಲ್ಲರಿಗೂ ಆತಂಕಕ್ಕೆ ಕಾರಣವಾಯಿತು. ಕಾರ್ಯಕ್ರಮದ ನಿರ್ವಾಹಕ ನಟ ಗಣೇಶ್‌ರವರು ಕಾವ್ಯ ಅವರು ಚೇತರಿಸಿಕೊಳ್ಳುತ್ತಿರುವುದಾಗಿ ಪ್ರಕಟಿಸಿದರೂ, ನೋಡುಗರಲ್ಲಿ ಆತಂಕ ಇದ್ದೇ ಇತ್ತು. ಅಂತೂ ಅವರ ತಂಡ (ಗಾಂಧಾರಿ) ಕ್ವಾರ್ಟರ್ ಫೈನಲ್ ತಲುಪಿರುವುದಾಗಿ ಪ್ರಕಟಿಸುವ ವೇಳೆಗೆ ಕಾವ್ಯ ಅವರು ಲವಲವಿಕೆಯಿಂದ ಕಾಣಿಸಿಕೊಂಡರು. ಇಂತಹ ದೈಹಿಕ ಶ್ರಮ, ಉಸಿರಾಟದ ಮೇಲೆ ಪರಿಣಾಮ ಬೀರುವಂತಹ ಸ್ಪರ್ಧೆಗಳನ್ನು ಸಾರಾಸಗಟಾಗಿ ವರ್ಜಿಸಿದರೆ, ಅವಘಡಗಳಿಗೆ ಕಾರಣವಾಗುವುದಿಲ್ಲ. ಕಾರ್ಯಕ್ರಮ ನಿರ್ಮಾಣ ಮಾಡುವವರು ಇದನ್ನು ಗಮನಿಸಬೇಕಾದದ್ದು ಅತ್ಯವಶ್ಯಕ.

—ಸುಂದರ್, ಬೆಂಗಳೂರು

## ಇವರು ತ್ರಿಕಾಲ ಜ್ಞಾನಿಗಳೇ?

ನ್ಯೂಸ್ ಚಾನೆಲ್‌ಗಳು, ವ್ಯೂಸ್ ಚಾನೆಲ್‌ಗಳಾಗಿದ್ದು ಹಳೆಯ ವಿಷಯ. ಕೆಲವು ಚಾನೆಲ್‌ಗಳಲ್ಲಿ ದಿನದ ನ್ಯೂಸ್‌ಗಳನ್ನು ನೇಪಥ್ಯಕ್ಕೆ ಸರಿಸಿ, ಆ ದಿನದ ಅಥವಾ ಸಮಕಾಲೀನ ಒಂದೆರಡು ಘಟನೆಗಳನ್ನು ಮುಖ್ಯವಾಗಿಸಿ ತಾಸುಗಟ್ಟಲೆ ಕೊರೆಯುವುದು ಅವರ ಚಾಳಿ. ನಿರೂಪಕರು/ಸುದ್ದಿ ವಾಚಕರು ತ್ರಿಕಾಲ ಮತ್ತು ತ್ರಿಲೋಕ ಜ್ಞಾನಿಗಳಂತೆ ವರ್ತಿಸುವುದು, ಉಳಿದವರ ಅಭಿಪ್ರಾಯ ತೂಕರಹಿತ, ನಗಣ್ಯ ಮತ್ತು ತಮ್ಮ ನಿಲುವೇ ಸರಿಯಾದದ್ದು ಎಂದು ಪ್ರತಿಪಾದಿಸುವುದು ವೀಕ್ಷಕರಿಗೆ ಕಿರಿಕಿರಿ ಉಂಟು ಮಾಡುತ್ತದೆ. ಸಹ ಸುದ್ದಿ ವಾಚಕರನ್ನು ಹೌದಪ್ಪಗಳಂತೆ ನಡೆಸಿಕೊಳ್ಳುತ್ತಿದ್ದು, ಅವರ ಅಭಿಪ್ರಾಯಕ್ಕೆ ಕಿಂಚಿತ್ ಮನ್ನಣೆ ಇರುವುದಿಲ್ಲ. ಅವರು ಮಧ್ಯೆ ಪ್ರವೇಶಿಸಲು ಪ್ರಯತ್ನಿಸಿದಾಗೆಲ್ಲಾ ಮುಖ್ಯ ವಾಚಕರು ಒಂದು ರೀತಿಯ ಅಸಹನೆ ತೋರಿಸಿದಂತೆ ಭಾಸವಾಗುತ್ತದೆ. ಸುದ್ದಿ ಇರಲಿ, ಚರ್ಚೆ ಇರಲಿ, ಎಲ್ಲರ ಅಭಿಪ್ರಾಯಗಳಿಗೆ ಸಮಾನವಾದ ಸ್ಪಂದನೆ ಇರಬೇಕು.

—ರಮಾನಂದ ಶರ್ಮಾ, ಬೆಂಗಳೂರು